ಶ್ರೀ ವಸಂತ ಏ ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):

ಅ) 2001 ರಿಂದ ಇಲ್ಲಿಯತನಕ ಮಂಜೂರಾದ ಮೊತ್ತ:

1) 2000–01 ನೇ ಸಾಲಿಗೆ : ರೂ. 595.44 ಲಕ್ಷಗಳು

2) 2001–02 ನೇ ಸಾಲಿಗೆ : ರೂ. 395.44 ಲಕ್ಷಗಳು

3) 2002–03 ನೇ ಸಾಲಿಗೆ : ರೂ. 442.53 ಲಕ್ಷಗಳು

4) 2003–04 ನೇ ಸಾಲಿಗೆ : ರೂ. 333.74 ಲಕ್ಷಗಳು

ಆ) ಮೇಲ್ಕಾಣಿಸಿದ ಹಣ ಪೂರ್ಣವಾಗಿ ಬಿಡುಗಡೆಯಾಗಿರುತ್ತದೆ.

ಇ) 2001 ರಿಂದ ಈವರೆಗೆ ಪೂರ್ಣಗೊಂಡಿರುವ ಶಾಶ್ವತ ತಡೆಗೋಡೆ ಕಾಮಗಾರಿಗಳು:

ಉಡುಪಿ ತಾಲ್ಲೂಕು : ಅಡ್ಡ ಬೆಂಗ್ರೆಯಲ್ಲಿ	40 ಮೀ.
ಭಟ್ಕಳ ತಾಲ್ಲೂಕು : ಗೊರಟೆ ಬಳಿ	100 ಮೀ.
ಬೆಳಕೆ ಬಳಿ	240 ಮೀ.
ಹಡಿನ ಸೋಡಿ ಗದ್ದೆ	100 ಮೀ.
ಮುಂಡಳ್ಳಿ ಬಳಿ	250 ಮೀ.
ಹೊನ್ನ ಗದ್ದೆ ಬಳಿ	100 ಮೀ.
ಹೊನ್ನಾವರ ತಾಲ್ಲೂಕು : ಮಂಕಿ ಬಳಿ	250 ಮೀ.
ಕುಮಟಾ ತಾಲ್ಲೂಕು : ಬಾಡ ಬಳಿ	400 ಮೀ.
ಕಿರುಬೈಲ ಬಳಿ	310 ಮೀ
ಅಂಕೋಲಾ ತಾಲ್ಲೂಕು : ಬೆಲೇಕೇರೆ, ಕೊಡೆಸಾಲ	260 ಮೀ.
ಹಾರವಾಡ, ತರಂಗಿಮಠ	220ಮೀ.
ಕಾರವಾರ ತಾಲ್ಲೂಕು: ಮುದಾ ಬಳಿ	250 ಮೀ.
ಅಮದಳ್ಳಿ ಬಳಿ	250 ಮೀ.
ಒಟ್ಟು	**2770 ಮೀ.**

ಈ) 2001 ರಿಂದ ಇಲ್ಲಿಯತನಕ ಬಂದರು ಇಲಾಖಾವತಿಯಿಂದ ಪೂರ್ಣಗೊಳಿಸಲ್ಪಟ್ಟ ಎಲ್ಲಾ ಶಾಶ್ವತ ತಡೆಗೋಡೆ ನಿರ್ಮಾಣ ಕಾಮಗಾರಿಗಳಿಗೆ ಹಣ ಸಂದಾಯವಾಗಿರುತ್ತದೆ. ಬಂದರು ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ವಹಿಸಿದ ಕಾಮಗಾರಿಗಳು ಸರ್ಕಾರ ರಚಿಸಿದ ತನಿಖಾ ಸಮಿತಿ ವ್ಯಾಪ್ತಿಯಲ್ಲಿ ಇರುತ್ತದೆ. ಈ ಕಾಮಗಾರಿಗಳ ಬಾಬ್ತು ರೂ. 625.66 ಲಕ್ಷ ಬಿಲ್ಲುಗಳನ್ನು ಸಂದಾಯ ಮಾಡಿರುವುದಿಲ್ಲ.

ಮೀನುಗಾರಿಕೆ ಅಭಿವೃದ್ಧಿ ನಿಗಮದ ಆರ್ಥಿಕ ಸ್ಥಿತಿ ಬಗ್ಗೆ

3096 (3473) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಸಧ್ಯದ ಆರ್ಥಿಕ ಸ್ಥಿತಿಗತಿಗಳೇನು;

ಆ) ಈ ನಿಗಮವನ್ನು ಮುಚ್ಚುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದರೆ, ಈ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಬಗ್ಗೆ ಸರ್ಕಾರದ ಚಿಂತನೆಯೇನು?

ಶ್ರೀ ವಸಂತ್ ವಿ ಸಾಲಿಯಾನ್ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) ದಿನಾಂಕ: 31.3.2003ರ ಅಂತ್ಯಕ್ಕೆ ತಾತ್ಕಾಲಿಕ ಲೆಕ್ಕಪತ್ರಗಳ ಪ್ರಕಾರ ಈ ನಿಗಮವು ರೂ. 7.99 ಕೋಟಿಗಳ ಸಂಚಿತ ನಷ್ಟವನ್ನು ಅನುಭವಿಸಿರುತ್ತದೆ. 2002–2003ನೇ ಸಾಲಿನಲ್ಲಿ ಇದು ರೂ.91.06 ಲಕ್ಷಗಳ ನಷ್ಟವನ್ನು ಅನುಭವಿಸಿದೆ.

ಆ) ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಪುನರ್ ರಚನಾ ಆಯೋಗವು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವನ್ನು ಮುಚ್ಚುವಂತೆ ನೀಡಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಈ ಬಗ್ಗೆ ಅಂತಿಮ ನಿರ್ಧಾರವನ್ನು ಇನ್ನೂ ಕೈಗೊಳ್ಳಬೇಕಾಗಿದೆ.

ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಸ್ವಯಂ ನಿವೃತ್ತಿ ಯೋಜನೆ

3097 (3474) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) : ಮಾನ್ಯ ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು;

ಆ) ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ತರಲಾಗಿದೆಯೇ;

ಇ) ಹಾಗಿದ್ದರೆ, ಈ ನೌಕರರಿಗೆ ಸಿಗುವ ಪರಿಹಾರ ಎಷ್ಟು;

ಈ) ಸ್ವಯಂ ನಿವೃತ್ತಿ ಬಯಸದ ನೌಕರರನ್ನು ಬೇರೆ ಇಲಾಖೆಗಳಿಗೆ ನಿಯೋಜಿಸಲಾಗುವುದೇ?

ಶ್ರೀ ವಸಂತ್ ವಿ ಸಾಲಿಯಾನ್ (ಮೀನುಗಾರಿಕೆ ಹಾಗು ಬಂದರು ರಾಜ್ಯ ಸಚಿವರು):

ಅ) ಪ್ರಸ್ತುತ ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರನ್ನು ಒಳಗೊಂಡಂತೆ ಒಟ್ಟು 227 ನೌಕರರು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಆ) ಇನ್ನೂ ಇಲ್ಲ.

ಇ) ಇನ್ನೂ ಅಂತಿಮಗೊಳಿಸಿಲ್ಲ

ಈ) ಇನ್ನೂ ಅಂತಿಮಗೊಳಿಸಿಲ್ಲ

ಕೊಪ್ಪಳ ಜಿಲ್ಲೆಯಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕ ಘಟಕಗಳಲ್ಲಿ ನೇಮಕಾತಿ ಮಾಡುವುದು

3098 (3462) : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಎಷ್ಟು?

ಆ) ಈ ಕೈಗಾರಿಕೆಗಳಲ್ಲಿ ಸರೋಜಿನಿ ಮಹಿಷಿ ವರದಿಯ ಪ್ರಕಾರ ನೇಮಕಾತಿ ಮಾಡಲಾಗಿದೆಯೆ; ಮಾಡದೆ ಇದ್ದ ಕೈಗಾರಿಕೆಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಈ ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳ ವಿವರ; ಇವುಗಳಿಗೆ ಸರ್ಕಾರದ ಸಹಾಯಧನವನ್ನು ಪೂರ್ಣ ವಿವರ ನೀಡುವುದು;

ಈ) ಕೈಗಾರಿಕೆಗಳು ಪರಿಸರ ಮಾಲಿನ್ಯವನ್ನು ಕಾಪಾಡಿಕೊಂಡಿವೆಯೇ ಕಾಪಾಡಿಕೊಂಡಿರುವ ಕೈಗಾರಿಕೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೆ?